

ದಾಲ್ ಮಾನೆಸ್ಟ್ರಿ




ವನ್ಯಜೀವಿಗಳ ಪಾರ್ಕ್



ನಾಮ್ಚಿ ಮಾನೆಸ್ಟ್ರಿ (ಇಂಟರ್‌ನೆಟ್ ಚಿತ್ರ)

1960ರಲ್ಲಿ ಪ್ರಾರಂಭವಾದ, ಬೋರ್ಡರ್ ರೋಡ್ ಆರ್ಗನೈಸೇಶನ್ ಸಂಸ್ಥೆಯ ಕೆಲಸದ ಅಚ್ಚುಕಟ್ಟುತನ ಎದ್ದು ಕಾಣುತ್ತದೆ. ಹಿಮಾಲಯದ ತಪ್ಪಲಿನಲ್ಲಿರುವ ಗಡಿ ಭಾಗದ ರಾಜ್ಯಗಳ ರಸ್ತೆಗಳನ್ನೆಲ್ಲ ಈ ಸಂಸ್ಥೆಯೇ ನಿರ್ವಹಿಸುತ್ತದೆ. ನಮ್ಮ ಸೇನೆಯ ಒಂದು ವಿಭಾಗ, ಸೇನೆಗೆ ಸಂಬಂಧಿಸಿದ ವಿವಿಧ ವಿಭಾಗಗಳ ಎಂಜಿನಿಯರ್‌ಗಳ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತದೆ. ಸದ್ಯಕ್ಕೆ ಈಶಾನ್ಯ ರಾಜ್ಯಗಳ ರಸ್ತೆಗಳ ನಿರ್ವಹಣೆಯನ್ನು ಈ ಸಂಸ್ಥೆ ನಿಭಾಯಿಸುತ್ತಿದೆ. ಜತೆಗೆ ನೆರೆಯ ದೇಶಗಳಾದ ಭೂತಾನ್, ಮ್ಯಾನ್ಮಾರ್, ಅಫ್ಘಾನಿಸ್ತಾನ ಮತ್ತು ಶ್ರೀಲಂಕಾ ದೇಶದ ದುರ್ಗಮವಾದ ರಸ್ತೆ ಮತ್ತು ಸೇತುವೆ ನಿರ್ಮಾಣದ ಹೊಣೆಯನ್ನೂ ಹೊತ್ತುಕೊಂಡಿದೆ.

ಗಡಿ ದಾಟಿದ ಬಳಿಕ..

ಸುಮಾರು ಎರಡು ಗಂಟೆಯ ಪ್ರಯಾಣದ ನಂತರ ತೀಸ್ತಾ ನದಿಯ ದಂಡೆಯಲ್ಲಿ ಸಿಕ್ಕಿಂ ಮತ್ತು ಪಶ್ಚಿಮ ಬಂಗಾಲದ ಗಡಿ ಭಾಗದಲ್ಲಿರುವ ಒಂದು ಸಣ್ಣ ಊರು ಸಿಗುತ್ತದೆ. 50 ಮೀಟರ್ ದಾಟಿದರೆ ಪಶ್ಚಿಮ ಬಂಗಾಳ ರಾಜ್ಯದ ರಸ್ತೆಗಳು ಆರಂಭವಾಗುತ್ತದೆ. ಕಡಿದಾದ ರಸ್ತೆಯಲ್ಲಿ ಸಾಗಿ ಎರಡು ಗಂಟೆಗಳ ಪ್ರಯಾಣದ ನಂತರ ಡಾರ್ಜಿಲಿಂಗ್ ಪ್ರವೇಶಿಸಿದೆವು. ನಮ್ಮ ವಾಹನವನ್ನು ಬಿಟ್ಟು ಡಾರ್ಜಿಲಿಂಗ್ ಪಟ್ಟಣದೊಳಗೆ ಅಲ್ಲಿಯದೇ ವಾಹನದಲ್ಲಿ ಹೋದೆವು.

ಸಮುದ್ರ ಮಟ್ಟದಿಂದ ಸುಮಾರು 6982 ಅಡಿಗಳಷ್ಟು ಎತ್ತರದಲ್ಲಿರುವ ಡಾರ್ಜಿಲಿಂಗ್, ಪಶ್ಚಿಮ ಬಂಗಾಳದ ತುತ್ತ ತುದಿಯ ಜಿಲ್ಲೆ. ಬೆಳಗ್ಗಿನ ಜಾವ ಮೂರು ಗಂಟೆಗೆಲ್ಲ ಎದ್ದು ಜೀಪಲ್ಲಿ ಟೈಗರ್ ಹಿಲ್‌ಗೆ ಹೊರಟೆವು. ವಿಶ್ವಪ್ರಸಿದ್ಧ ಕಾಂಚನಜುಂಗ ಶಿಖರವನ್ನು ನೋಡುವ ಕುತೂಹಲ ಎಲ್ಲರಿಗೆ. ಬೆಳಿಗ್ಗೆ ನಾಲ್ಕೂವರೆಗೆಲ್ಲ ಸೂರ್ಯೋದಯವಾಗುತ್ತದೆ. ಆ ಬೆಳಗ್ಗಿನ ಸೂರ್ಯನ ಕಿರಣ ಕಾಂಚನಜುಂಗಾದ ಶಿಖರಗಳ ಮೇಲೆ ಬೀಳುವಾಗ ಆ ಪರ್ವತ ಶಿಖರ ಬಂಗಾರದ ಬಣ್ಣದಲ್ಲಿ ಕಂಗೊಳಿಸುತ್ತದೆ. ಈ ದೃಶ್ಯವನ್ನು ನೋಡಲು ಶೀತಗಾಳಿ, ಚಳಿಯನ್ನು ಲೆಕ್ಕಿಸದೆ ಸಾವಿರಾರು ಜನರು ಸೇರುತ್ತಾರೆ. ನಮ್ಮ ಅದೃಷ್ಟ ಚೆನ್ನಾಗಿದ್ದು, ಮಂಜು, ಮೋಡ ಕಾಣಿಸದಿದ್ದರೆ ಮೌಂಟ್ ಎವರೆಸ್ಟ್‌ನ ದರ್ಶನ ಭಾಗ್ಯ ಸಿಗುತ್ತದೆ. ಆದರೆ ನಮಗೆ ಆ ಭಾಗ್ಯ ಇರಲಿಲ್ಲ. ಮಂಜು. ಮೋಡ ಕವಿದಿತ್ತು.

ಬೌದ್ಧ ದೇವಾಲಯ ಡಾಲಿಮಾನೆಸ್ಟ್ರಿಗೆ ಭೇಟಿ ಕೊಟ್ಟೆವು. ಇಲ್ಲಿ ಬುದ್ಧನ ಎತ್ತರವಾದ ವಿಗ್ರಹವಿದೆ. ಪ್ರಶಾಂತ ವಾತಾವರಣ ಮನಸ್ಸಿಗೆ ತುಂಬಾ ಹಿತ ಕೊಡುತ್ತದೆ. ಮುಂದೆ ಬಟಷೀಯ ಲೂಪ್ ಎನ್ನುವ ಸ್ಥಳಕ್ಕೆ ಬಂದೆವು. ಇಲ್ಲಿ